# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 340 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 18–07–2024 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ವಿಧದ ಮದ್ಯದಂಗಡಿಗಳಿಗೆ ಪರವಾನಿಗೆಯನ್ನು ನೀಡಲಾಗುತ್ತಿದೆ; ಇಲಾಖಾ ಮಾರ್ಗಸೂಚಿ ಹಾಗೂ ಮಂಜೂರಾತಿಗೆ ಬೇಕಾದ ದಾಖಲೆಗಳನ್ವಯ ಎಲ್ಲಾ ದಾಖಲೆಗಳು ಸರಿಯಾಗಿದ್ದು, ಪರವಾನಗಿಯನ್ನು ನೀಡಲು ಸರ್ಕಾರವು ತೆಗೆದುಕೊಳ್ಳುವ ಸಮಯವೇನು; (ಸಂಪೂರ್ಣ ಮಾಹಿತಿ ನೀಡುವುದು) | 1992ನೇ ಸಾಲಿನಿಂದ ಹೊಸದಾಗಿ ಸಿಎಲ್–2 ಹಾಗೂ ಸಿಎಲ್–9 ಸನ್ನದನ್ನು ನೀಡಲು ಸರ್ಕಾರ ನಿರ್ಬಂಧಿಸಿರುವುದರಿಂದ, ಹೊಸದಾಗಿ ಸಿಎಲ್–2 ಮತ್ತು ಸಿಎಲ್–9 ಸನ್ನದುಗಳ ಮಂಜೂರಾತಿ ನೀಡಲಾಗುತ್ತಿಲ್ಲ. ರಾಜ್ಯದಲ್ಲಿ ಪ್ರಸ್ತುತ ನೀಡಲಾಗುತ್ತಿರುವ ಸನ್ನದುಗಳ ವಿವರ ಕೆಳಕಂಡಂತಿದೆ. |

| ಕ್ರ ಸಂ | ಸನ್ನದಿನ ವಿಧ | ವಿವರ |
|---|---|---|
| 1. | ಸಿಎಲ್–4 | ಕ್ಲಬ್‌ಗಳಿಗೆ |
| 2. | ಸಿಎಲ್–6(ಎ) | ಸ್ಟಾರ್ ಹೋಟೆಲ್‌ಗಳಿಗೆ |
| 3. | ಸಿಎಲ್–7 | ಹೋಟೆಲ್ ಮತ್ತು ವಸತಿ ಗೃಹಗಳನ್ನು ಹೊಂದಿದವರಿಗೆ |
| 4. | ಸಿಎಲ್–7ಎ (ಫಾರಂ–14) | ಟೂರಿಸ್ಟ್ ಹೋಟೆಲ್ ಸನ್ನದು |
| 5. | ಸಿಎಲ್–7ಬಿ (ಫಾರಂ–15) | ಟೂರಿಸ್ಟ್ ಹೋಟೆಲ್ ಬಿಯರ್ ಬಾರ್ ಸನ್ನದು |
| 6. | ಸಿಎಲ್–7ಸಿ | ಚಲಿಸುವ ರೈಲಿಗೆ ಕೆ.ಎಸ್.ಟಿ.ಡಿ.ಸಿ/ಐ.ಟಿ.ಡಿ.ಸಿ ಇಲಾಖೆಯಿಂದ ನಡೆಸುವ ಸಲುವಾಗಿ ನೀಡುವ ಸನ್ನದು |
| 7. | ಸಿಎಲ್–8 | ಮಿಲಿಟರಿ ಕ್ಯಾಂಟಿನ್ |
| 8. | ಸಿಎಲ್–8ಎ | ಮಿಲಿಟರಿ ಕ್ಯಾಂಟಿನ್ ಸ್ಟೋರ್ಸ್ ಬಾಂಡೆಡ್ ವೇರ್ ಹೌಸ್ ಸನ್ನದು |
| 9. | ಸಿಎಲ್–8ಬಿ | ಬಿ.ಎಸ್.ಎಫ್ ಮತ್ತು ಪ್ಯಾರಾ ಮಿಲಿಟರಿ ಫೋರ್ಸ್ ಸನ್ನದುಗಳು |
| 10. | ಸಿಎಲ್–11ಸಿ | (ಎಂಎಸ್ಐಎಲ್) |
| 11. | ಸಿಎಲ್–16 | (ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಡ್ಯೂಟಿ ಫ್ರೀ ಮದ್ಯದಂಗಡಿ) |

| | | |
|---|---|---|
| 12. | ಸಿಎಲ್–17 | (ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಸ್ಥಳೀಯ ಮತ್ತು ಅಂತರರಾಷ್ಟ್ರೀಯ ವಿಮಾನ ಪ್ರಯಾಣಿಕರಿಗೆ ರೀಫ್ರೆಶ್ ಮೆಂಟ್ ರೂಮ್ (ಬಾರ್) ಸನ್ನದು) |
| 13. | ಸಿಎಲ್–18 | (ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಅಂತರರಾಷ್ಟ್ರೀಯ ವಿಮಾನ ಪ್ರಯಾಣಿಕರಿಗೆ ರೀಫ್ರೇಶ್ ಮೆಂಟ್ ರೂಮ್ (ಬಾರ್) ಸನ್ನದು) |

ಪ್ರಸ್ತುತ ಮಂಜೂರು ಮಾಡಲಾಗುತ್ತಿರುವ ಸಿಎಲ್–4, ಸಿಎಲ್–6ಎ, ಸಿಎಲ್–7, ಸಿಎಲ್–7ಎ, ಸಿಎಲ್–7ಬಿ, ಸಿಎಲ್–7ಸಿ, ಸಿಎಲ್–8, ಸಿಎಲ್–8ಎ, ಸಿಎಲ್–8ಬಿ, ಸಿಎಲ್–11ಸಿ, ಸಿಎಲ್–14, ಸಿಎಲ್–15, ಸಿಎಲ್–16, ಸಿಎಲ್–17 ಮತ್ತು ಸಿಎಲ್–18, ಇತರೆ ಸನ್ನದುಗಳಿಗೆ ಹೊಂದಿಕೊಂಡಂತೆ (ಸಿಎಲ್–4, ಸಿಎಲ್–6ಎ, ಸಿಎಲ್–7, ಸಿಎಲ್–9, ಸಿಎಲ್–17 ಮತ್ತು ಸಿಎಲ್–18) ಆರ್.ವಿ.ಬಿ, ಮೈಕ್ರೊಬ್ರೀವರಿ, ವೈನ್ ಟಾವರ್ನ್/ವೈನ್ ಬೂಟಿಕ್ ಸನ್ನದುಗಳನ್ನು ಮಂಜೂರಾತಿ ಕೋರಿ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿದ್ದಲ್ಲಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 180 ನಾಸೇಖಾ 2018 ದಿನಾಂಕ:25.09.2018ರಲ್ಲಿ ಸನ್ನದು ಮಂಜೂರಾತಿಗೆ 35 ದಿನಗಳ ಕಾಲಮಿತಿಯನ್ನು ನಿಗಧಿಪಡಿಸಿದ್ದು, ವಿವರಗಳು ಈ ಕೆಳಕಂಡಂತಿದೆ.

| ಕ್ರಸಂ | ಹೆಸರಿಸಲಾದ ಅಧಿಕಾರಿ | ಹಂತ | ನಿಗಧಿಪಡಿಸಿರುವ ದಿನಗಳು |
|---|---|---|---|
| 1. | ಅಬಕಾರಿ ನಿರೀಕ್ಷಕರು | 1 | 05 |
| 2. | ಅಬಕಾರಿ ಉಪ ಅಧೀಕ್ಷಕರು, ಉಪ ವಿಭಾಗ | 2 | 02 |
| 3. | ಅಬಕಾರಿ ಉಪ ಆಯುಕ್ತರು | 3 | 05 |
| 4. | ಜಿಲ್ಲಾಧಿಕಾರಿಗಳು | 4 | 10 |
| 5. | ಅಬಕಾರಿ ಆಯುಕ್ತರ ಕಛೇರಿಯ ವಿಷಯ ನಿರ್ವಾಹಕರು | 5 | 02 |
| 6. | ಕಛೇರಿ ಅಧೀಕ್ಷಕರು | 6 | 01 |
| 7. | ಅಬಕಾರಿ ಉಪ ಅಧೀಕ್ಷಕರು | 7 | 01 |
| 8. | ಅಬಕಾರಿ ಅಧೀಕ್ಷಕರು | 8 | 01 |
| 9. | ಅಬಕಾರಿ ಉಪ ಆಯುಕ್ತರು (01, 02, 03, 04) | 9 | 01 |

| | | | |
|---|---|---|---|
| 10. | ಅಬಕಾರಿ ಜಂಟಿ ಆಯುಕ್ತರು (ಐ.ಎಂ.ಎಲ್) | 10 | 02 |
| 11. | ಅಬಕಾರಿ ಆಯುಕ್ತರು | 11 | 05 |
| | ಒಟ್ಟು | | 35 |

| | | |
|---|---|---|
| ಆ) | 2021ರವರೆಗೂ ರಾಜ್ಯದಲ್ಲಿ ಸಿಎಲ್–2, ಸಿಎಲ್–9 ಹಾಗೂ ಸಿಎಲ್–7 ಸನ್ನದುಗಳು ಸರ್ಕಾರದಿಂದ ಎಷ್ಟು ಮಂಜೂರಾಗಿದೆ; (ವರ್ಷವಾರು ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಜೂನ್–2021ರ ಅಂತ್ಯಕ್ಕೆ ರಾಜ್ಯದಲ್ಲಿ 3,965 ಸಿಎಲ್–2, 3,527 ಸಿಎಲ್–9 ಹಾಗೂ 1,764 ಸಿಎಲ್–7 ಸನ್ನದುಗಳು ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾವಾರು ವಿವರಗಳನ್ನು ಅನುಬಂಧ–01ರಲ್ಲಿ ಇರಿಸಿದೆ. |
| ಇ) | 2021 ರಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ಸಿಎಲ್–2 ಹಾಗೂ ಸಿಎಲ್–9 ಸನ್ನದುಗಳು ಸರ್ಕಾರದಿಂದ ಎಷ್ಟು ಮಂಜೂರಾಗಿದೆ; (ವರ್ಷವಾರು, ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | 1992ನೇ ಸಾಲಿನಿಂದ ಹೊಸದಾಗಿ ಸಿಎಲ್–2 ಹಾಗೂ ಸಿಎಲ್–9 ಸನ್ನದನ್ನು ನೀಡಲು ಸರ್ಕಾರ ನಿರ್ಬಂಧಿಸಿರುವುದರಿಂದ, ಹೊಸದಾಗಿ ಸಿಎಲ್–2 ಮತ್ತು ಸಿಎಲ್–9 ಸನ್ನದುಗಳ ಮಂಜೂರಾತಿ ನೀಡಲಾಗುತ್ತಿಲ್ಲ. |
| ಈ) | 2021 ರಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ಸಿಎಲ್–7 ಸನ್ನದುಗಳು ಸರ್ಕಾರದಿಂದ ಎಷ್ಟು ಮಂಜೂರಾಗಿದೆ; (ವರ್ಷವಾರು, ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | 2021–22ನೇ ಸಾಲಿನಿಂದ 2023–24ನೇ ಅಬಕಾರಿ ಸಾಲಿನವರೆಗೆ 1,171 ಸಿಎಲ್–7 ಸನ್ನದುಗಳನ್ನು ಮಂಜೂರು ಮಾಡಿದ್ದು, ವರ್ಷವಾರು ಹಾಗೂ ಜಿಲ್ಲಾವಾರು ವಿವರಗಳನ್ನು ಅನುಬಂಧ–02ರಲ್ಲಿ ಇರಿಸಿದೆ. |
| ಉ) | ಈ ಮದ್ಯದಂಗಡಿಗಳಿಗೆ ಪರವಾನಿಗೆ ನೀಡುವ ಸಂಬಂಧ ಭ್ರಷ್ಟಾಚಾರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಭ್ರಷ್ಟಾಚಾರ ಮಾಡುತ್ತಿರುವವರ ವಿರುದ್ಧ ಯಾವ ಕಠಿಣ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಅಬಕಾರಿ ಕಾಯ್ದೆ ಮತ್ತು ನಿಯಮಗಳು ಹಾಗೂ ಸುತ್ತೋಲೆಗಳನ್ನು ಪಾಲಿಸದೆ ಸಿಎಲ್–7 ಸನ್ನದನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡುತ್ತಿರುವ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದ್ದು, ಅಂತಹ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲಾಗುತ್ತಿದ್ದು ವಿವರವನ್ನು ಅನುಬಂಧ–3ರಲ್ಲಿ ಇರಿಸಿದೆ. |

**ಆಇ 56 ಇಎಲ್‌ಕ್ಯೂ 2024**

(ಆರ್.ಬಿ.ತಿಮ್ಮಾಪುರ)

ಅಬಕಾರಿ ಸಚಿವರು.

## ಅನುಬಂಧ-01

| ಕ್ರ. ಸಂ. | ವಿಭಾಗ/ಜಿಲ್ಲೆ | ಜೂ-2021 ರ ಅಂತ್ಯಕ್ಕೆ ಕಾರ್ಯನಿರ್ವಹಿಸುತ್ತಿದ್ದಂತೆ | | |
|---|---|---|---|---|
| | | ಸಿಎಲ್-2 | ಸಿಎಲ್-7 | ಸಿಎಲ್-9 |
| 1 | ಬೆಂಗಳೂರು ನಗರ ಜಿಲ್ಲೆ - 1 | 112 | 30 | 180 |
| 2 | ಬೆಂಗಳೂರು ನಗರ ಜಿಲ್ಲೆ - 2 | 138 | 109 | 172 |
| 3 | ಬೆಂಗಳೂರು ನಗರ ಜಿಲ್ಲೆ - 3 | 132 | 37 | 185 |
| 4 | ಬೆಂಗಳೂರು ನಗರ ಜಿಲ್ಲೆ - 4 | 65 | 41 | 129 |
| 5 | ಬೆಂಗಳೂರು ನಗರ ಜಿಲ್ಲೆ - 5 | 92 | 24 | 161 |
| 6 | ಬೆಂಗಳೂರು ನಗರ ಜಿಲ್ಲೆ - 6 | 121 | 38 | 199 |
| 7 | ಬೆಂಗಳೂರು ನಗರ ಜಿಲ್ಲೆ - 7 | 96 | 26 | 208 |
| 8 | ಬೆಂಗಳೂರು ನಗರ ಜಿಲ್ಲೆ - 8 | 123 | 96 | 138 |
| 9 | ಕೋಲಾರ | 104 | 41 | 89 |
| 10 | ಬೆಂಗಳೂರು ಗ್ರಾಮಾಂತರ | 64 | 48 | 61 |
| 11 | ಚಿಕ್ಕಬಳ್ಳಾಪುರ | 70 | 7 | 72 |
| 12 | ರಾಮನಗರ | 89 | 58 | 9 |
| 13 | ತುಮಕೂರು | 192 | 29 | 53 |
| 14 | ಬಾಗಲಕೋಟೆ | 101 | 62 | 65 |
| 15 | ಬೆಳಗಾವಿ ಉತ್ತರ | 132 | 52 | 54 |
| 16 | ಬೆಳಗಾವಿ ದಕ್ಷಿಣ | 142 | 35 | 95 |
| 17 | ವಿಜಯಪುರ | 90 | 44 | 42 |
| 18 | ಧಾರವಾಡ | 97 | 41 | 95 |
| 19 | ಚಿಕ್ಕಮಗಳೂರು | 85 | 33 | 75 |
| 20 | ದಾವಣಗೆರೆ | 100 | 17 | 110 |
| 21 | ಹಾವೇರಿ | 80 | 26 | 37 |
| 22 | ಶಿವಮೊಗ್ಗ | 132 | 32 | 68 |
| 23 | ಬಳ್ಳಾರಿ | 90 | 24 | 41 |
| 24 | ವಿಜಯನಗರ | 73 | 13 | 21 |
| 25 | ಚಿತ್ರದುರ್ಗ | 83 | 20 | 112 |
| 26 | ಗದಗ | 55 | 32 | 24 |
| 27 | ಕೊಪ್ಪಳ | 56 | 49 | 18 |
| 28 | ಬೀದರ್ | 77 | 30 | 31 |
| 29 | ಕಲಬುರಗಿ | 131 | 70 | 53 |
| 30 | ರಾಯಚೂರು | 92 | 36 | 68 |
| 31 | ಯಾದಗಿರಿ | 49 | 23 | 19 |
| 32 | ದಕ್ಷಿಣ ಕನ್ನಡ | 153 | 81 | 216 |
| 33 | ಕೊಡಗು | 88 | 37 | 66 |
| 34 | ಉಡುಪಿ | 89 | 90 | 202 |
| 35 | ಉತ್ತರ ಕನ್ನಡ | 81 | 20 | 31 |
| 36 | ಚಾಮರಾಜನಗರ | 62 | 21 | 28 |
| 37 | ಹಾಸನ | 147 | 92 | 74 |
| 38 | ಮಂಡ್ಯ | 103 | 43 | 87 |
| 39 | ಮೈಸೂರು ನಗರ | 103 | 69 | 99 |
| 40 | ಮೈಸೂರು ಗ್ರಾಮಾಂತರ | 76 | 88 | 40 |
| ರಾಜ್ಯದ ಒಟ್ಟು | | 3965 | 1764 | 3527 |

**ಆಇ 56 ಇಎಲ್‌ಕ್ಯೂ 2024**

## ಅನುಬಂಧ-02

| ಕ್ರ. ಸಂ. | ವಿಭಾಗ/ಜಿಲ್ಲೆ | 2021-22 | 2022-23 | 2023-24 |
|---|---|---|---|---|
| | | ಸಿಎಲ್-7 | | |
| 1 | ಬೆಂಗಳೂರು ನಗರ ಜಿಲ್ಲೆ - 1 | 10 | 20 | 20 |
| 2 | ಬೆಂಗಳೂರು ನಗರ ಜಿಲ್ಲೆ - 2 | 17 | 27 | 26 |
| 3 | ಬೆಂಗಳೂರು ನಗರ ಜಿಲ್ಲೆ - 3 | 25 | 19 | 23 |
| 4 | ಬೆಂಗಳೂರು ನಗರ ಜಿಲ್ಲೆ - 4 | 1 | 2 | 4 |
| 1 | ಬೆಂಗಳೂರು ನಗರ ಜಿಲ್ಲೆ - 5 | 5 | 5 | 12 |
| 2 | ಬೆಂಗಳೂರು ನಗರ ಜಿಲ್ಲೆ - 6 | 17 | 12 | 19 |
| 3 | ಬೆಂಗಳೂರು ನಗರ ಜಿಲ್ಲೆ - 7 | 3 | 8 | 5 |
| 4 | ಬೆಂಗಳೂರು ನಗರ ಜಿಲ್ಲೆ - 8 | 23 | 24 | 28 |
| 5 | ಕೋಲಾರ | 18 | 24 | 22 |
| 1 | ಬೆಂಗಳೂರು ಗ್ರಾಮಾಂತರ | 5 | 10 | 35 |
| 2 | ಚಿಕ್ಕಬಳ್ಳಾಪುರ | 12 | 13 | 18 |
| 3 | ರಾಮನಗರ | 8 | 5 | 11 |
| 4 | ತುಮಕೂರು | 18 | 31 | 15 |
| 1 | ಬಾಗಲಕೋಟೆ | 3 | 8 | 3 |
| 2 | ಬೆಳಗಾವಿ ಉತ್ತರ | 6 | 6 | 5 |
| 3 | ಬೆಳಗಾವಿ ದಕ್ಷಿಣ | 3 | 7 | 3 |
| 4 | ವಿಜಯಪುರ | 1 | 2 | 6 |
| 5 | ಧಾರವಾಡ | 3 | 1 | 3 |
| 1 | ಚಿಕ್ಕಮಗಳೂರು | 4 | 2 | 6 |
| 2 | ದಾವಣಗೆರೆ | 0 | 0 | 2 |
| 3 | ಹಾವೇರಿ | 2 | 3 | 2 |
| 4 | ಶಿವಮೊಗ್ಗ | 5 | 19 | 4 |
| 1 | ಬಳ್ಳಾರಿ | 2 | 6 | 0 |
| 2 | ವಿಜಯನಗರ | 0 | 4 | 2 |
| 3 | ಚಿತ್ರದುರ್ಗ | 5 | 1 | 2 |
| 4 | ಗದಗ | 3 | 6 | 2 |
| 5 | ಕೊಪ್ಪಳ | 4 | 9 | 4 |
| 1 | ಬೀದರ್ | 4 | 8 | 6 |
| 2 | ಕಲಬುರಗಿ | 10 | 2 | 8 |
| 3 | ರಾಯಚೂರು | 2 | 7 | 8 |
| 4 | ಯಾದಗಿರಿ | 2 | 1 | 3 |
| 1 | ದಕ್ಷಿಣ ಕನ್ನಡ | 6 | 10 | 20 |
| 2 | ಕೊಡಗು | 5 | 6 | 4 |
| 3 | ಉಡುಪಿ | 5 | 11 | 4 |
| 4 | ಉತ್ತರ ಕನ್ನಡ | 3 | 6 | 3 |
| 1 | ಚಾಮರಾಜನಗರ | 4 | 2 | 5 |
| 2 | ಹಾಸನ | 63 | 57 | 16 |
| 3 | ಮಂಡ್ಯ | 11 | 18 | 14 |
| 4 | ಮೈಸೂರು ನಗರ | 10 | 6 | 13 |
| 5 | ಮೈಸೂರು ಗ್ರಾಮಾಂತರ | 18 | 12 | 19 |
| **ಒಟ್ಟು** | | **346** | **420** | **405** |

ಆಇ 56 ಇಎಲ್‌ಕ್ಯೂ 2024

ಅನುಬಂಧ-3

| ಕ್ರಸ | ಅಧಿಕಾರಿ ನೌಕರರ ಹೆಸರು | ಕಡತ ಸಂಖ್ಯೆ ಹಾಗೂ ವಿಷಯ | ಪ್ರಸ್ತುತ ಹಂತ |
|---|---|---|---|
| 1 | ಶ್ರೀ ಮಂಜುನಾಥ್ ಎಸ್, ಅಂದಿನ ಅಬಕಾರಿ ನಿರೀಕ್ಷಕರು ವಲಯ ಸಂ-17, ಕೆಂಗೇರಿ, ಬಿಯುಡಿ-3 ಹಾಲಿ ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಎಕ್ಸೈಸ್-17011/17/2022, ಸಿಎಲ್-7 ಮದ್ಯದಂಗಡಿ ಪರವಾನಗಿ ನೀಡುವ ಸಂಬಂಧ ಅಕ್ರಮ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ | ಸಿಎಲ್-7 ಮದ್ಯದಂಗಡಿ ಪರವಾನಗಿ ನೀಡುವ ಸಂಬಂಧ ಅಕ್ರಮ ಹಣ ಬೇಡಿಕೆ ಇಟ್ಟಿರುವ ಶ್ರೀ ಮಂಜುನಾಥ್ ಎಸ್, ಅಂದಿನ ಅಬಕಾರಿ ನಿರೀಕ್ಷಕರು ವಲಯ ಸಂ-17, ಕೆಂಗೇರಿ, ಬಿಯುಡಿ-3 ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ (ಎ.ಸಿ.ಬಿ). ನಗರ ವಿಭಾಗದ ಮೊಕದ್ದಮೆ ಸಂ: 43/2022, ಕಲಂ-7(a) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.<br><br>ಶ್ರೀ ಮಂಜುನಾಥ್ ಎಸ್, ಅಂದಿನ ಅಬಕಾರಿ ನಿರೀಕ್ಷಕರು ವಲಯ ಸಂ-17, ಕೆಂಗೇರಿ, ಬಿಯುಡಿ-3 ಇವರನ್ನು ಅಬಕಾರಿ ಆಯುಕ್ತರ ಪ್ರಾಧಿಕಾರವು ಆದೇಶ ಸಂಖ್ಯೆ: ಎಕ್ಸೈಸ್-17011/17/2022, ದಿನಾಂಕ:27-05-2022 ರನ್ವಯ ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಮೆ. ಎಸ್.ಡಿ.ಯು (ಫ್ರೂಟ್) ವೈನರಿ ಪ್ರೈ, ಲಿ., ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿಗೆ ವರ್ಗಾಯಿಸಿ ಆದಶಿಸಲಾಗಿರುತ್ತದೆ.<br><br>ಸದರಿಯವರ ಅಮಾನತ್ತು ಆದೇಶವನ್ನು ಈ ಪ್ರಾಧಿಕಾರದ ಆದೇಶ ಸಂ: ಎಕ್ಸೈಸ್-17011/17/2022, ದಿನಾಂಕ: 11-01-2023 ರಂದು ತೆರವುಗೊಳಿಸಿ ಆಪಾದಿತರನ್ನು M/s TOIYET Breweries Pvt, Ltd., ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿಗೆ ತೈನಾತಿಸಲಾಗಿರುತ್ತದೆ.<br><br>ಈ ಪ್ರಾಧಿಕಾರದ ಪತ್ರ ಸಂ: ಎಕ್ಸೈಸ್-17011/17/2022, ದಿನಾಂಕ: 13-03-2024 ರಂದು ಶ್ರೀ ಮಂಜುನಾಥ್ ಎಸ್., ಅಬಕಾರಿ ನಿರೀಕ್ಷಕರು, ಅಂದಿನ ಕೆಂಗೇರಿ ವಲಯ- 17 ಕಛೇರಿ, ಬೆಂಗಳೂರು ನಗರ ಜಿಲ್ಲೆ ಬಿಯುಡಿ-3 ಹಾಲಿ ಅಬಕಾರಿ ನಿರೀಕ್ಷಕರು, ಅಬಕಾರಿ ನಿರೀಕ್ಷಕರ ಕಛೇರಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರನ್ನು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ- 1988 (ತಿದ್ದುಪಡಿ ಕಾಯ್ದೆ 2018) ರ ಕಲಂ.7( ) ರ ಅಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು |

| | | | |
|---|---|---|---|
| | | | ಮಂಜೂರಾತಿ ಆದೇಶವನ್ನು ನೀಡಲಾಗಿರುತ್ತದೆ. ಮಾನ್ಯ ಲೋಕಾಯುಕ್ತ ಇವರ ಹಂತದಲ್ಲಿ ಹಾಗೂ ಸಕ್ಷಮ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ಚಾಲ್ತಿಯಲ್ಲಿದೆ. |
| 2 | 1. ಶ್ರೀಮತಿ ಸ್ವಪ್ನ, ಅಂದಿನ ಅಬಕಾರಿ ಉಪ ಆಯುಕ್ತರು ದಾವಣಗೆರೆ ಜಿಲ್ಲೆ.<br>2. ಶ್ರೀ ರವಿ ಮರಿಗೌಡರು, ಅಂದಿನ ಅಬಕಾರಿ ಉಪ ಅಧೀಕ್ಷಕರು, ದಾವಣಗೆರೆ ಉಪ ವಿಭಾಗ, ದಾವಣಗೆರೆ ಜಿಲ್ಲೆ ಹಾಲಿ<br>3. ಶ್ರೀಮತಿ ಶೀಲಾ ಜೆ. ಕೆ., ಅಬಕಾರಿ ನಿರೀಕ್ಷಕರು, ಹರಿಹರ ವಲಯ ಹಾಲಿ<br>4. ಶ್ರೀ ಅಶೋಕ, ಅಂದಿನ ಪ್ರಥಮ ದರ್ಜೆ ಸಹಾಯಕರು,ಅಬಕಾರಿ ಉಪ ಆಯುಕ್ತರ ಕಛೇರಿ ದಾವಣಗೆರೆ ಜಿಲ್ಲೆ ಹಾಲಿ ಮೆ. ಐ.ಸಿ.ಪಿ.ಎಲ್. ಸ್ಯಾಮ್‌ಸನ್ಸ್ | ಸಂಖ್ಯೆ:ಎಕ್ಸೈಸ್-17011/46/2023,<br><br>ಸಿಎಲ್-7 ಮದ್ಯದಂಗಡಿ ಪರವಾನಗಿ ನೀಡುವ ಸಂಬಂಧ ಅಕ್ರಮ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ | ಸಿಎಲ್-7 ಮದ್ಯದಂಗಡಿ ಪರವಾನಗಿ ನೀಡುವ ಸಂಬಂಧ ಅಕ್ರಮ ಹಣ ಬೇಡಿಕೆ ಇಟ್ಟಿರುವವರ ವಿರುದ್ಧ ಇಲಾಖೆಯ ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧ ಮೊಕದ್ದಮೆ ಸಂಖ್ಯೆ:16/2023 ದಿನಾಂಕ:13-10-2023 ಕಲಂ-7( ), 7(ಬಿ), 12 ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ನ್ನು ಮಾನ್ಯ ಲೋಕಾಯುಕ್ತ ಇವರು ದಾಖಲಿಸಿರುತ್ತಾರೆ.<br><br>i) ಶ್ರೀಮತಿ ಸ್ವಪ್ನ, ಅಂದಿನ ಅಬಕಾರಿ ಉಪ ಆಯುಕ್ತರು ದಾವಣಗೆರೆ ಜಿಲ್ಲೆ. ಇವರು ಅಕ್ರಮ ಹಣ ಬೇಡಿಕೆ ಇಟ್ಟಿರುವ ಆರೋಪದಡಿ ದಿನಾಂಕ:15-10-2023 ರಿಂದ 26-11-2023 ರವರೆಗೆ ನ್ಯಾಯಾಂಗ ಬಂಧನದಲ್ಲಿರುತ್ತಾರೆ. ಸಕ್ಷಮ ಪ್ರಾಧಿಕಾರಿಗಳಾದ ಸರ್ಕಾರವು ಆದೇಶ ಸಂಖ್ಯೆ:ಆಇ/113/ ಇಪಿಎಸ್/2023, ದಿನಾಂಕ:28-11-2023 ರನ್ವಯ ಸೇವೆಯಿಂದ ಅಮಾನತ್ತು ಪಡಿಸಿ ಆದೇಶಿಸಿರುತ್ತಾರೆ. ಸದರಿ ಅಮಾನತ್ತು ಆದೇಶದ ವಿರುದ್ಧ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 5117/2023ನ್ನು ಪ್ರಶ್ನಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ದಿನಾಂಕ:0504-2024 ಆದೇಶದನ್ವಯ ಸದರಿಯವರ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಆಪಾದಿತರು ಸರ್ಕಾರದ ಅಮಾನತ್ತು ಆದೇಶ ಹಾಗೂ ಕೆ.ಎಸ್.ಎ.ಟಿ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ - ರಿಟ್ ಅರ್ಜಿ ಸಂಖ್ಯೆ:11085/2024 ದಾಖಲಿಸಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:23-04-2023 ರ ಮದ್ಯಂತರ ಆದೇಶದಲ್ಲಿ ಅಮಾತನ್ನು ಆದೇಶಕ್ಕೆ ತಡೆಯಾಜ್ಞೆಯನ್ನು ನೀಡಿರುತ್ತದೆ. ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆ ಚಾಲ್ತಿಯಲ್ಲಿದ್ದು ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುತ್ತದೆ. |

| | | | |
|---|---|---|---|
| | ಡಿಸ್ಟಿಲರೀಸ್, ದುಗ್ಗಾವತಿ, ಹರಪ್ಪನಹಳ್ಳಿ, ಬಳ್ಳಾರಿ ಜಿಲ್ಲೆ.<br>5. ಶ್ರೀಮತಿ ಶೈಲಶ್ರೀ ಎಂ. ಮಡಿವಾಳರ, ಅಂದಿನ ದ್ವಿತೀಯ ದರ್ಜೆ ಸಹಾಯಕರು ಹಾಲಿ ಅಬಕಾರಿ ಉಪ ಆಯುಕ್ತರ ಕಛೇರಿ, ವಿಜಯನಗರ ಜಿಲ್ಲೆ. | | ii) ಶ್ರೀ ರವಿ ಮರಿಗೌಡ್ರ ಅಬಕಾರಿ ಉಪ ಅಧೀಕ್ಷಕರು ಇವರ ವಿರುದ್ಧ ಅಕ್ರಮ ಹಣ ಬೇಡಿಕೆ ಸಂಬಂಧಿಸಿದಂತೆ ಸದರಿಯವರನ್ನು ಅಬಕಾರಿ ಆಯುಕ್ತರ ಪ್ರಾಧಿಕಾರವು ಆದೇಶ ಸಂಖ್ಯೆ:ಎಕ್ಸೈಸ್–17011/46/2023, ದಿನಾಂಕ:06–12–2023 ರನ್ವಯ ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಎಂ.ಪಿ.ಡಿಸ್ಟಿಲರೀಸ್ ಕೋಲಾರ ಜಿಲ್ಲೆ ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ. ಸದರಿ ಆಪಾದಿತರು ಅಬಕಾರಿ ಆಯುಕ್ತರ ಪ್ರಾಧಿಕಾರದ ಆದೇಶವನ್ನು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:5236/2023 ದಿನಾಂಕ: 18–12–2023 ರನ್ವಯ ಪ್ರಶ್ನಿಸಿದ್ದು ಮಾನ್ಯ ನ್ಯಾಯಾಲಯವು ದಿನಾಂಕ:05–04–2024ರ ಅಂತಿಮ ಆದೇಶದನ್ವಯ ಆಪಾದಿತರ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಅಬಕಾರಿ ಆಯುಕ್ಥರ ಅಮಾನತ್ತು ಆದೇಶ ಹಾಗೂ ಕರ್ನಾಟಕ ರಾಜ್ಯ ಆಡಳಿತ ಮಂಡಳಿಯ ಅಂತಿಮ ಆದೇಶವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ:11483/2024 ನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಯಾವುದೇ ತಡೆಯಾಜ್ಞೆಯನ್ನು ನೀಡಿರುವುದಿಲ್ಲ. ಸದರಿಯವರ ಅಮಾನತ್ತು ಆದೇಶವನ್ನು ಆದೇಶ ಸಂಖ್ಯೆ:ಎಕ್ಸೈಸ್–17011/46/2023, ದಿನಾಂಕ:11–06–2024 ರನ್ವಯ ಇನ್ನೂ 06 ತಿಂಗಳು ವಿಸ್ತರಿಸಲಾಗಿರುತ್ತದೆ.<br><br>iii) ಶ್ರೀಮತಿ ಶೀಲಾ ಜೆ. ಕೆ., ಅಬಕಾರಿ ನಿರೀಕ್ಷಕರು ಇವರು ಅಕ್ರಮ ಹಣ ಬೇಡಿಕೆಗೆ ಸಂಬಂಧಿಸಿದಂತೆ ಅಬಕಾರಿ ಆಯುಕ್ತರ ಪ್ರಾಧಿಕಾರವು ಆದೇಶ ಸಂಖ್ಯೆ:ಎಕ್ಸೈಸ್–17011/ 46/2023, ದಿನಾಂಕ:03–11–2023 ರನ್ವಯ ಅಮಾನತ್ತುಪಡಿಸಿ ಆದೇಶಗೊಳಿಸಲಾಗಿರುತ್ತದೆ. ಸದರಿಯವರು ಕರ್ನಾಟಕ ರಾಜ್ಯ ಆಡಳಿತ ಮಂಡಳಿಯಲ್ಲಿ ಅಮಾನತ್ತು ಆದೇಶವನ್ನು ಪ್ರಶ್ನಿಸಿ ಅರ್ಜಿ ಸಂಖ್ಯೆ:5123/2023 ರನ್ವಯ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ದಿನಾಂಕ:04–12–2023ರ ಅಂತಿಮ ಆದೇಶದಲ್ಲಿ ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಸದರಿ ಆಪಾದಿತರು ಅಮಾನತ್ತು ಆದೇಶವನ್ನು ಹಾಗೂ ಕರ್ನಾಟಕ ರಾಜ್ಯ ಆಡಳಿತ ನ್ಯಾಯ |

| | | | |
|---|---|---|---|
| | | | ಮಂಡಳಿಯ ಅರ್ಜಿಯ ಅಂತಿಮ ಆದೇಶವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ:11505/2024 ನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:23–04–2024 ಮದ್ಯದಂತರ ಆದೇಶಲ್ಲಿ ಅಬಕಾರಿ ಆಯುಕ್ತರ ಪ್ರಾಧಿಕಾರದ ಅಮಾನತ್ತು ಆದೇಶ ಹಾಗೂ ಮಾನ್ಯ ಕರ್ನಾಟಕ ರಾಜ್ಯ ನ್ಯಾಯ ಆಡಳಿತ ಮಂಡಳಿಯ ಅಂತಿಮ ಆದೇಶಕ್ಕೆ ತಡೆಯಾಜ್ಞೆಯನ್ನು ನೀಡಿರುತ್ತದೆ. ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುತ್ತದೆ.<br><br>iv) ಶ್ರೀ ಅಶೋಕ, ಅಂದಿನ ಪ್ರಥಮ ದರ್ಜೆ ಸಹಾಯಕರು, ಇವರನ್ನು ಮಾನ್ಯ ಲೋಕಾಯುಕ್ತ ಅಧಿಕಾರಿಗಳು ಅಕ್ರಮ ಹಣದೊಂದಿಗೆ ಟ್ರ್ಯಾಪ್ ಆಗಿದ್ದು, ಸದರಿಯವರನ್ನು ಅಬಕಾರಿ ಆಯುಕ್ತರ ಪ್ರಾಧಿಕಾರವು ಆದೇಶ ಸಂಖ್ಯೆ: ಎಕ್ಸೈಸ್–17011/43/2023, ದಿನಾಂಕ:03–11–2023 ರನ್ವಯ ಅಮಾನತ್ತುಪಡಿಸಲಾಗಿರುತ್ತದೆ. ಸದರಿಯವರ ಅಮಾನತ್ತನ್ನು ಆದೇಶ ಆದೇಶ: ಎಕ್ಸೈಸ್–17011/46/2023, ದಿನಾಂಕ:09–04–2024ರಲ್ಲಿ ತೆರವುಗೊಳಿಸಿ ಮೆ. ಐ.ಸಿ.ಪಿ.ಎಲ್. ಸ್ಯಾಮ್‌ಸನ್ಸ್ ಡಿಸ್ಟಿಲರೀಸ್, ದುಗ್ಗಾವತಿ, ಹರಪ್ಪನಹಳ್ಳಿ, ಬಳ್ಳಾರಿ ಜಿಲ್ಲೆ ಇಲ್ಲಿಗೆ ತೈನಾತಿಸಲಾಗಿರುತ್ತದೆ.<br><br>v) ಶ್ರೀಮತಿ ಶೈಲಶ್ರೀ ಎಂ. ಮಡಿವಾಳರ, ಅಂದಿನ ದ್ವಿತೀಯ ದರ್ಜೆ ಸಹಾಯಕರು ಇವರ ವಿರುದ್ಧದ ಅಕ್ರಮ ಹಣವನ್ನು ಬೇಡಿಕೆ ಇಟ್ಟಿರುವ ಆರೋಪದಡಿ ಅಬಕಾರಿ ಆಯುಕ್ತರ ಪ್ರಾಧಿಕಾರವು ಸಂಖ್ಯೆ:ಎಕ್ಸೈಸ್–17011/43/2023, ದಿನಾಂಕ:03–11–2023 ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ. ಸದರಿಯವರ ಅಮಾನತ್ತನ್ನು ತೆರವುಗೊಳಿಸಿ ಆದೇಶ:ಎಕ್ಸೈಸ್–17011/46/2023, ದಿನಾಂಕ:09–04–2024 ರಲ್ಲಿ ಅಬಕಾರಿ ಉಪ ಆಯುಕ್ತರ ಕಛೇರಿ, ವಿಜಯನಗರ ಜಿಲ್ಲೆ ಇಲ್ಲಿಗೆ ತೈನಾತಿಸಿ ಆದೇಶಿಸಿದೆ. ಮಾನ್ಯ ಲೋಕಾಯುಕ್ತ ಇವರ ಹಂತದಲ್ಲಿ ಹಾಗೂ ಸಕ್ಷಮ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ಚಾಲ್ತಿಯಲ್ಲಿದೆ. |

| | | | |
|---|---|---|---|
| 3 | ಶ್ರೀಮತಿ ಸಿ. ಸೆಲೀನಾ, ಅಂದಿನ ಅಬಕಾರಿ ಉಪ ಆಯುಕ್ತರು, ಕೊಪ್ಪಳ ಜಿಲ್ಲೆ ಹಾಲಿ ಅಬಕಾರಿ ಉಪ ಆಯುಕ್ತರು, ಚಿಕ್ಕಮಗಳೂರು ಜಿಲ್ಲೆ. | ಸಂಖ್ಯೆ: ಅಬಕಾರಿ –17011/15/2022<br><br>ಸಿಎಲ್–7 ಮದ್ಯದಂಗಡಿ ಪರವಾನಗಿ ನೀಡಿರುವ ಸಂಬಂಧ ಅಕ್ರಮ ಹಣಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ | ಶ್ರೀಮತಿ ಸಿ. ಸೆಲೀನಾ ಸಿ., ಅಂದಿನ ಅಬಕಾರಿ ಉಪ ಆಯುಕ್ತರು, ಕೊಪ್ಪಳ ಜಿಲ್ಲೆ ಹಾಲಿ ಅಬಕಾರಿ ಉಪ ಆಯುಕ್ತರು, ಚಿಕ್ಕಮಗಳೂರು ಜಿಲ್ಲೆ ಇವರು ಸಿಎಲ್–7 ಪರವಾನಗಿ ಮಂಜೂರು ಮಾಡಿರುವ ವಿಚಾರದಲ್ಲಿ ಲಂಚದ ಹಣದ ಬೇಡಿಕೆಗೆ ಸಂಬಂಧಿಸಿದಂತೆ ಅಂದಿನ ಎ.ಸಿ.ಬಿ. ಮಾನ್ಯ ಹಾಲಿ ಲೋಕಾಯುಕ್ತ ಪೊಲೀಸ್ ಕೊಪ್ಪಳ ಜಿಲ್ಲೆ ಇವರು ಅಪರಾಧ ಸಂಖ್ಯೆ: 05/2022, ದಿನಾಂಕ:14–05–2022 ಕಲಂ–7(a) ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ನ್ನು ದಾಖಲಿಸಿರುತ್ತಾರೆ.<br><br>ಸದರಿ ಆರೋಪದ ಮೇಲೆ ಸಕ್ಷಮ ಪ್ರಾಧಿಕಾರಿಗಳಾದ ಸರ್ಕಾರವು ಆದೇಶ ಸಂಖ್ಯೆ:ಆಇ/48/ಇಪಿಎಸ್/2022,ಬೆಂಗಳೂರು, ದಿನಾಂಕ:25–05–2022 ರನ್ವಯ ಸದರಿಯವರನ್ನು ಅಮಾನತ್ತು ಪಡಿಸಿ ಅವರ ಲೀನ್‌ನ್ನು ಮೆ. ಜಾನ್ ಡಿಸ್ಟಿಲರೀಸ್ ಪ್ರೈ. ಲಿ., ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಿರುತ್ತದೆ. ಸದರಿ ಅಮಾನತ್ತು ಆದೇಶವನ್ನು ಆಪಾದಿತರು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 10667/2022 ರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ.<br><br>ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ದಿನಾಂಕ:24–05–2024ರ ಆದೇಶದಲ್ಲಿ ಅಮಾನತ್ತು ಆದೇಶವನ್ನು ವಜಾಗೊಳಿಸಿರುತ್ತದೆ. ಮಾನ್ಯ ಲೋಕಾಯುಕ್ತ ಹಂತದಲ್ಲಿ ತನಿಖೆ ಜಾರಿಯಲ್ಲಿದೆ. ಮಾನ್ಯ ಲೋಕಾಯುಕ್ತ ಇವರ ಹಂತದಲ್ಲಿ ಹಾಗೂ ಸಕ್ಷಮ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ಚಾಲ್ತಿಯಲ್ಲಿದೆ. |

**ಆಇ 56 ಇಎಲ್‌ಕ್ಯೂ 2024**